**ಸಾಕ್ಷಿಗೆ ದಿನಾಂಕ 17-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀಮತಿ ಎಸ್ ಬಿ ವಕೀಲರು ಶ್ರೀ ಬಿ ಕೆ ಕೆ ವಕೀಲರ ಪರವಾಗಿಃ**

**1.** ನಾನು ಈ ಪ್ರಕರಣದಲ್ಲಿ ವೈದ್ಯ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

**2.** ನಾನು ಈ ಪ್ರಕರಣದಲ್ಲಿ ಗಾಯಾಳುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿದಾರರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ **36** | ಕೇಸ್ ಶೀಟ್ |

**ಪಾಟೀ ಸವಾಲುಃ *1* ನೇ ಎದುರುದಾರರ ಪರ ಶ್ರೀ ಕೆ ಆರ್ ಎಸ್ ವಕೀಲರಿಂದಃ**

1. ಸಂಜಯ್ ಸಿಲಿನ್ ರಾಜ್ ನಿಗೆ ನಾನು ವೈಯಕ್ತಿಕವಾಗಿ ಚಿಕಿತ್ಸೆ ನೀಡಿರುತ್ತೇನೆ. ಸಂಜಯ್ ಸಿಲಿನ್ ರಾಜ್ ರವರು ಬೌರಿಂಗ್ ಮತ್ತು ನಿಮಾನ್ಸ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ನಂತರ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತಾರೆ. ಸಂಜಯ್ ಸಿಲಿನ್ ರಾಜ್ ರವರನ್ನು ನಮ್ಮ ಆಸ್ಪತ್ರೆಗೆ ಶಿಫಾರಸ್ಸು ಮಾಡಿದ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಂಜಯ್ ಸಿಲಿನ್ ರಾಜ್ ರವರು ನಮ್ಮ ಆಸ್ಪತ್ರೆಗೆ ಬಂದ ನಂತರ ನಮ್ಮ ಆಸ್ಪತ್ರೆಯಲ್ಲಿ ಎಂ ಎಲ್ ಸಿ ಯನ್ನು ಮಾಡಿಸಿರುತ್ತೇವೆ, ಆದರೆ ಅಪಘಾತಕ್ಕೊಳಗಾದ ವಾಹನಗಳ ನೋಂದಣಿ ಸಂಖ್ಯೆ ನಮೂದಿಸಿರುವುದಿಲ್ಲ ಎಂದರೆ ಸರಿ.

2. ಸಂಜಯ್ ಸಿಲಿನ್ ರಾಜ್ ರನ್ನು ಅವರ ಹೆಂಡತಿ ಮರಿಯಾ ಪ್ರಿಯಾ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಸಂಜಯ್ ಸಿಲಿನ್ ರಾಜ್ ನಿಗೆ ಪ್ರಜ್ಞೆ ಇರಲಿಲ್ಲ ಮತ್ತು ಉಸಿರಾಟದ ತೊಂದರೆ ಇತ್ತು. ಸಂಜಯ್ ಸಿಲಿನ್ ರಾಜ್ ರವರ ಹೆಂಡತಿಯ ಹೇಳಿಕೆಯನ್ನು

ದಾಖಲಿಸಿಕೊಂಡಿರುತ್ತೇವೆ. ಸಂಜಯ್ ಸಿಲಿನ್ ರಾಜ್ ರವರ ಹೆಂಡತಿಯ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಬೌರಿಂಗ್ ಮತ್ತು ನಿಮಾನ್ಸ್ ಆಸ್ಪತ್ರೆಯ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ.

3. ಬೌರಿಂಗ್ ಮತ್ತು ನಿಮಾನ್ಸ್ ಆಸ್ಪತ್ರೆಯವರು ನಮ್ಮ ಆಸ್ಪತ್ರೆಗೆ ಶಿಫಾರಸ್ಸು ಪತ್ರ ನೀಡಿರುವುದಿಲ್ಲ. ಸಂಜಯ್ ಸಿಲಿನ್ ರಾಜ್ ರವರು ದಿಃ12.09.2022 ರಿಂದ 07.10.2022 ರವರೆಗೆ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಸಂಜಯ್ ಸಿಲಿನ್ ರಾಜ್ ರವರು ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ ಅವರ ದೇಹ ಸ್ಥಿತಿ ಕನಿಷ್ಟ ಸುಧಾರಣೆಯಾಗಿತ್ತು. ಸಂಜಯ್ ಸಿಲಿನ್ ರಾಜ್ ರವರು ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರದಲ್ಲಿ ದಿಃ02.09.2023 ರಂದು ಮುಂದುವರೆದ ಚಿಕಿತ್ಸೆಗೆ ಬಂದಿರುತ್ತಾರೆ. ಆದರೆ ದಾಖಲೆ ಕಡತದಲ್ಲಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಸಂಜಯ್ ಸಿಲಿನ್ ರಾಜ್ ರವರು ದಿಃ02.09.2023 ರಂದು ನಮ್ಮ ಆಸ್ಪತ್ರೆಗೆ ಮುಂದುವರೆದ ಚಿಕಿತ್ಸೆಗೆ ಬಂದಿರದೇ ಇದ್ದರೂ ಸಹ ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಿಃ07.10.2022 ರಿಂದ ಸಂಜಯ್ ಸಿಲಿನ್ ರಾಜ್ ರವರು ಆಸ್ಟರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ, ಆದರೆ ದಾಖಲೆ ನೋಡಿರುವುದಿಲ್ಲ. ಸದರಿ ಆಸ್ಪತ್ರೆಯಲ್ಲಿ ಸಂಜಯ್ ಸಿಲಿನ್ ರಾಜ್ ರವರು ಎಷ್ಟು ದಿನ ದಾಖಲಾಗಿದ್ದರು ಮತ್ತು ಯಾವ ಯಾವ ಚಿಕಿತ್ಸೆ ಪಡೆದಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸಂಜಯ್ ಸಿಲಿನ್ ರಾಜ್ ರವರು ಮೃತಪಟ್ಟಿರುತ್ತಾರೆ ಆದರೆ ದಿನಾಂಕ ಗೊತ್ತಿಲ್ಲ. ಸಂಜಯ್ ಸಿಲಿನ್ ರಾಜ್ ರವರು ಯಾವ ಕಾರಣದಿಂದ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಅರ್ಜಿದಾರರ ಪರ ಶ್ರೀಮತಿ ಎಸ್ ಬಿ ವಕೀಲರು ಶ್ರೀ ಬಿ ಕೆ ಕೆ ವಕೀಲರ ಪರವಾಗಿಃ**

ಅಪಘಾತದಲ್ಲಿ ಈ ರೀತಿಯ ಗಾಯಗಳಾದಾಗ ಮರಣ ಹೊಂದುವ ಸಾಧ್ಯತೆ ಇದೇಯಾ ಎಂದರೆ ಸರಿ.

ಮರು-ಪಾಟೀ ಸವಾಲುಃ ***1* ನೇ ಎದುರುದಾರರ ಪರ ಶ್ರೀ ಕೆ ಆರ್ ಎಸ್ ವಕೀಲರಿಂದಃ**

ಸಂಜಯ್ ಸಿಲಿನ್ ರಾಜ್ ರವರು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರದಿಂದ ಅವರ ದೈಹಿಕ ಸ್ಥಿತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಂಜಯ್ ಸಿಲಿನ್ ರಾಜ್ ರವರು ಅಪಘಾತದಿಂದಾದ ಗಾಯಗಳಿಂದ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**